

# ಏನು ಮಾಡುತಿತ್ತು?

■ ಗುಂಡುರಾವ್ ದೇಸಾಯಿ
ಕಲೆ: ಸಂತೋಷ್ ಸಸಿಹಿತ್ಲು

ಕಿವಿಯ ಮೇಲೆ ಕುಳಿತ
ಸೊಳ್ಳೆಯೊಂದು
ಏನು ಮಾಡುತಿತ್ತು?

ಏನು ಮಾಡುತಿತ್ತು?
ಜುಂಯಿಗುಡುತಿತ್ತು
ರಕ್ತ ಹೀರುತಿತ್ತು
ಮುಖದ ಮೇಲೆ ಕುಳಿತ
ನೊಣವೊಂದು
ಏನು ಮಾಡುತಿತ್ತು?

ಏನು ಮಾಡುತಿತ್ತು?
ಬುಂಯಿ ಅಂತಿತ್ತು
ಕಿರಿಕಿರಿ ಕೊಡುತಿತ್ತು
ಹಾಸಿಗೆಯಲ್ಲಿ ಹೊಕ್ಕ
ತಿಗಣೆಯೊಂದು
ಏನು ಮಾಡುತಿತ್ತು?

ಏನು ಮಾಡುತಿತ್ತು?
ಕಟಕಟ ಕಡಿತಿತ್ತು, ಒದ್ದಾಡಿಸಿತ್ತು
ಹೊಟ್ಟೆಯಲ್ಲಿ ಹೊಕ್ಕ
ಜಂತುಹುಳುವೊಂದು
ಏನು ಮಾಡತಿತ್ತು?

ಏನು ಮಾಡುತಿತ್ತು?
ಹೊಟ್ಟೆ ಕಡಿತಿತ್ತು,
ನೋವಲ್ಲಿ ನರಳಿಸಿತ್ತು
ಬಾಯಲ್ಲಿ ಹೊಕ್ಕ
ಬ್ಯಾಕ್ಟೀರಿಯಾವೊಂದು
ಏನು ಮಾಡುತಿತ್ತು? ■

ಎಂದಳು. ರಾಮು ತಾಯಿ ಮುಖ ಮಿಕಿ ಮಿಕಿ ನೋಡಿ, 'ಯಾಕಮ್ಮ' ಎಂದನು.

ರಾಮು ನಿನಗೆ ಸಿಕ್ಕ ಸರ ಎಲ್ಲಿತ್ತು ನಿಜ ಹೇಳು ಎಂದಾಗ ಈ ಬಾರಿ ರಾಮು ಸುಳ್ಳು ಹೇಳಲು ಸಾಧ್ಯವಾಗಲಿಲ್ಲ. ಅಮ್ಮಾ ಎಂದು ಜೋರಾಗಿ ಅಳುತ್ತ ತಾಯಿ ತಬ್ಬಿಕೊಂಡು ನಡೆದ ವಿಷಯ ಹೇಳಿದನು. ಅಮ್ಮ ನೀನು ಆಗಾಗ ಸರದ ಆಶೆ ಹೇಳುವುದನ್ನು ಕೇಳುತ್ತಿದ್ದೆ, ಆಕಸ್ಮಾತ್ ಸೋಮು ಮನೆಯಲ್ಲಿದ್ದ ಸರ ನೋಡಿದೆ ಕೊಡಬೇಕು ಎಂದು ತಂದುಬಿಟ್ಟೆ ಕ್ಷಮಿಸಮ್ಮ ಇನ್ನೆಂದೂ ಇಂತಹ ತಪ್ಪು ಮಾಡಲ್ಲ ಎಂದು ಕಣ್ಣೀರು ಸುರಿಸಿದ. ಸುಲೋಚನಾಳಿಗೆ ಕೆಟ್ಟೆನಿಸಿತು. ಅವನನ್ನು ಕರೆದುಕೊಂಡು ನೇರ ಸೋಮುವಿನ ಮನೆಗೆ ಬಂದು ಸೋಮು ತಾಯಿಗೆ ಗಿರಿಜಾ ಅವರ ಬಳಿ ತನ್ನ ಮಗ ಮಾಡಿದ ತಪ್ಪಿಗೆ ಕ್ಷಮಿಸು ಎಂದು ನಡೆದ ವಿಷಯವನ್ನು ಹೇಳಿದಳು, ಗಿರಿಜಾ ಮಗ ಏನೋ ಗೊತ್ತಿಲ್ಲದೆ ತಪ್ಪು ಮಾಡಿಬಿಟ್ಟಿದ್ದಾನೆ ಅದನ್ನೇ ದೊಡ್ಡದು ಮಾಡಬೇಡಿ ಮಕ್ಕಳ ಮನಸ್ಸು ಮೃದುವಾಗಿರುತ್ತದೆ ಹಾಗೆ ತನ್ನ ಮಗ ಸೋಮು ಸೇರಿದಂತೆ ಯಾರಿಗೂ ಹೇಳುವುದು ಬೇಡ. ಅವರು ಎಂದಿನಂತೆ ಹೀಗೆ ಗೆಳೆಯರಾಗಿ ಇರಲಿ ಎಂದು ಗಿರಿಜಾ ಸಮಾಧಾನಿಸಿದಳು.

ರಾಮು, ಮತ್ತು ತಾಯಿ ಸುಲೋಚನಾ ಇಬ್ಬರೂ ಕಣ್ಣೀರು ಒರೆಸಿಕೊಂಡು ಗಿರಿಜಾಳನ್ನು ಆಪ್ತತೆಯಿಂದ ನೋಡಿದರು. ಅಷ್ಟರಲ್ಲಿ ಹೊರಗೆ ಹೋಗಿದ್ದ ಸೋಮು ಒಳಬಂದು ಅರೇ ರಾಮು, ಆಂಟಿ ಎಂದು ನಕ್ಕನು. ■

## ಕುಂಚ ಪ್ರಪಂಚ



ವೈಷ್ಣವಿ, 4ನೇ ತರಗತಿ,
ಅಮಾತ್ರ ಅಕಾಡೆಮಿ,
ಬೆಂಗಳೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in